# ಗುಡುಗಿಗೂ ಅರ್ಥವುಂಟೇ?

ಸ್ವಾಮಿ ರಾಘವೇಶಾನಂದ

ನಾವೆಲ್ಲಾ ಉಪನಿಷತ್ತು ಅಥವಾ ವೇದಾಂತ ಎನ್ನುವ ಹೆಸರನ್ನು ಕೇಳಿದ್ದೇವೆ. ಆದರೆ ಇಂತಹ ಹೆಸರನ್ನು ಕೇಳಿದರೇ ನಮಗೆಲ್ಲಾ ಸ್ವಲ್ಪ ಭಯ. ಕಾರಣ, ವೇದಾಂತ ಅಂದರೆ ಅದೊಂದು ಕಬ್ಬಿಣದ ಕಡಲೆ, ಯಾರಿಂದಲೂ ಅದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂಬ ಒಂದು ತಪ್ಪು ಅಭಿಪ್ರಾಯವುಂಟು. ಒಬ್ಬ ಭಕ್ತರು ಒಮ್ಮೆ ಹಿಮಾಲಯದ ಸಮೀಪದಲ್ಲಿರುವ ಹರಿದ್ವಾರಕ್ಕೆ ಹೋಗಿ ಬಂದರು. ಅಲ್ಲಿ ಯಾರೋ ಒಂದು ಆಧ್ಯಾತ್ಮಿಕ ಶಿಬಿರ ನಡೆಸುತ್ತಿದ್ದರು. ಒಂದು ತಿಂಗಳ ಶಿಬಿರ. ಅಲ್ಲಿಂದ ಹಿಂದಿರುಗಿದುದೇ, ಹಿಮಾಲಯದ ಗಂಗೆಯ ನೀರು, ಹಲವಾರು ದೇವಸ್ಥಾನಗಳ ಪ್ರಸಾದ ಎಲ್ಲವನ್ನೂ ತಂದು ಹಂಚಿದರು. ನಾನು ಅವರನ್ನು, 'ಆಧ್ಯಾತ್ಮಿಕ ಶಿಬಿರ ಹೇಗಿತ್ತು?' ಎಂದು ಕೇಳಿದೆ. 'ಓಹ್, ಬಹಳ ಚೆನ್ನಾಗಿತ್ತು. ಎಲ್ಲೆಲ್ಲಿಂದಲೋ ದೊಡ್ಡ ದೊಡ್ಡ ಸಂನ್ಯಾಸಿಗಳೆಲ್ಲಾ ಬಂದಿದ್ದರು. ಎಲ್ಲರೂ ಮಹಾತ್ಮರೆ. ಅವರೆಲ್ಲಾ ಹಗಲೂ, ರಾತ್ರಿ ವೇದಾಂತದ ಮೇಲೆ ಪ್ರವಚನ ಮಾಡಿದರು. ತುಂಬಾ ಸೊಗಸಾಗಿತ್ತು. ಏನು ಪಾಂಡಿತ್ಯ! ಏನು ಜ್ಞಾನ!' ಎಂದರು.

'ಸರಿ, ನೀವು ಏನು ಕಲಿತಿರಿ? ಯಾವುದಾದರೂ ಒಂದೆರಡನ್ನು ಹೇಳಿ' ಅಂದೆ.

ಅದಕ್ಕೆ ಅವರು, 'ಅಯ್ಯೋ ಅದನ್ನು ನಾನು ಹೇಗೆ ಹೇಳಬಲ್ಲೆ? ಅದೆಲ್ಲಾ ದೊಡ್ಡ ದೊಡ್ಡ ವೇದಾಂತ. ಕೇಳಲು ತುಂಬಾ ಚೆನ್ನಾಗಿರುವುದೇ ಹೊರತು, ನಮಗೆ ಏನೂ ಅರ್ಥವಾಗುವುದಿಲ್ಲ' ಎಂದರು.

ಅಂದರೆ ವೇದಾಂತವೆಂದರೆ 'ಒಂದು ಅರ್ಥವಾಗದ ವಿಷಯವನ್ನು, ಅರ್ಥವಾಗದ ರೀತಿಯಲ್ಲಿ ವಿವರಿಸುವುದು', ಎಂದು ಅವರ ಅಭಿಪ್ರಾಯ. ಅದೇನಾದರೂ ಅರ್ಥವಾಗಿಬಿಟ್ಟಲ್ಲಿ, ಅದು ವೇದಾಂತವಲ್ಲ.

ಇದೊಂದು ತಪ್ಪು ಕಲ್ಪನೆ. ವೇದಾಂತದ ಮತ್ತೊಂದು ಹೆಸರು ಉಪನಿಷತ್ತು. ಇದು ಋಷಿ ಮುನಿಗಳಿಂದ ಹೇಳಲ್ಪಟ್ಟಿದ್ದರೂ ಪ್ರತಿಯೊಬ್ಬ ಮನುಷ್ಯನೂ ಅರ್ಥಮಾಡಿಕೊಳ್ಳಬಹುದಾದುದು. ಅಷ್ಟೇ ಅಲ್ಲ, ಪ್ರತಿಯೊಬ್ಬ ಸಾಧಾರಣ ವ್ಯಕ್ತಿಯೂ ಅತ್ಯಂತ ಆವಶ್ಯಕವಾಗಿ ತಿಳಿಯಲೇಬೇಕಾದ ವಿದ್ಯೆ. ಕಾರಣ ಎಲ್ಲ ಮನುಷ್ಯರ ಗುರಿಯೂ ತಾನು ಜೀವನದಲ್ಲಿ ಆನಂದವಾಗಿರಬೇಕು, ಸಂತೋಷವಾಗಿರಬೇಕು ಎಂದು. ಆದರೆ ಆ ಆನಂದ, ಆ ಸಂತೋಷ ಜಗತ್ತಿನಲ್ಲಿ ಎಲ್ಲೋ ಇಲ್ಲ. ಅದು ಪ್ರತಿಯೊಬ್ಬ ಮನುಷ್ಯನ ಅಂತರ್ಯದಲ್ಲೇ ಇದೆ. ಹೊರಗಿನ ಜಗತ್ತಿನಲ್ಲಿ ಅದನ್ನು ಹುಡುಕುವುದು, ಕುರುಡನು ಒಂದು ಕತ್ತಲೆ ಕೋಣೆಯಲ್ಲಿ, ಇಲ್ಲದೇ ಇರುವ ಒಂದು ಕಪ್ಪು ಬೆಕ್ಕನ್ನು ಹುಡುಕುವಂತೆ. ಯಾವನೊಬ್ಬ ಮನುಷ್ಯನು, ಇಡೀ ಜಗತ್ತಿನ ಸಾಮ್ರಾಟನಾದರೂ ಅವನಿಗೆ ಪೂರ್ಣ ಮನಃಶಾಂತಿಯು ದೊರೆಯದು. ಜಗತ್ತಿನೊಳಗಣ ಯಾವತ್ತೂ ಜಡ ವಸ್ತುಗಳ ಜ್ಞಾನ ದೊರೆತರೂ ಅವನ ಜ್ಞಾನದ ಹಸಿವು ಹಿಂಗದು. ಆತ್ಮಜ್ಞಾನವೇ, ಅಂದರೆ ತನ್ನನ್ನು ತಾನು ಅರಿಯುವುದೇ ಜ್ಞಾನದ ಪರಮ ಸೀಮೆ. ಈ ಜ್ಞಾನವನ್ನು ಉಪನಿಷತ್ತುಗಳು ಬೋಧಿಸುತ್ತವೆ. ಇಂತಹ ಜ್ಞಾನವನ್ನು ಉಪನಿಷತ್ಕಾರರು ಕೇವಲ ಒಣ ಒಣ ವಾಕ್ಯಗಳಿಂದ ಹೇಳದೆ ಒಮ್ಮೆ ಕಥಾರೂಪದಿಂದ, ಇನ್ನೊಮ್ಮೆ ಸುಂದರವಾದ ಸಂವಾದರೂಪದಿಂದ ಹೇಳಿರುವರು. ಇಂತಹ ಒಂದು ಕಥೆಯನ್ನು ನೋಡೋಣ.

ಶುಕ್ಲಯಜುರ್ವೇದದ ಒಂದು ಭಾಗ ಬೃಹದಾರಣ್ಯಕ ಉಪನಿಷತ್. ಹೆಸರಿಗೆ ತಕ್ಕಂತೆ ಇದು ಗಾತ್ರದಲ್ಲೂ ಸ್ವಲ್ಪ ಬೃಹತ್ತೇ. ಇದರಲ್ಲಿ ಆತ್ಮಜ್ಞಾನವನ್ನು ಹಲವು ರೀತಿಯಲ್ಲಿ ಉಪದೇಶಿಸಲಾಗಿದೆ. ಹಿಂದಿನ ಕಾಲದಲ್ಲಿ ಆತ್ಮಜ್ಞಾನವನ್ನು ಪಡೆಯಲು ಎಷ್ಟೇ ದೊಡ್ಡ ಮನೆತನದಿಂದ ಬಂದಿದ್ದವರಾದರೂ ಸರಿ, ಗುರುಗೃಹಕ್ಕೆ ತೆರಳಿ ಅಲ್ಲಿ ೧೨ ವರ್ಷಗಳಾದರೂ ಗುರುವಿನ ಸೇವೆ ಮಾಡಿ, ಅವರಿಂದ ಉಪದೇಶ ಪಡೆದು, ಆತ್ಮಜ್ಞಾನದ ವಿಧಿಯನ್ನು ಅರಿತುಕೊಳ್ಳುತ್ತಿದ್ದರು. ಅಂತಹ ಗುರು ಒಬ್ಬರು ಪ್ರಜಾಪತಿ ಎಂದು. ಅವರು ಸಾಕ್ಷಾತ್ ಪರಬ್ರಹ್ಮನ ಅವತಾರವೇ ಎಂದು ಪ್ರತೀತಿ. ಅವರು ಒಂದು ವಿಧದಲ್ಲಿ ಒಬ್ಬ ಮನಶ್ಶಾಸ್ತ್ರಜ್ಞರೂ ಆಗಿದ್ದರು. ಯಾರು ಅವರ ಬಳಿ ಬರುತ್ತಾರೋ, ಅವರು ನಿರಾತಂಕವಾಗಿ ತಮ್ಮ ತಮ್ಮ ಸಮಸ್ಯೆಗಳನ್ನು ಅವರಲ್ಲಿ ಹೇಳಿಕೊಳ್ಳುವಂತೆ ಮಾಡಿ, ಅವರವರ ಮಾನಸಿಕ ಗೊಂದಲಗಳನ್ನು ಬಗೆಹರಿಸುವ ಸಾಮರ್ಥ್ಯ ಅವರದಾಗಿತ್ತು. ಒಮ್ಮೆ ಅವರ ಬಳಿಗೆ, ದೇವತೆಗಳೂ, ಅಸುರರೂ, ಮಾನವರೂ ಬಂದು, ದಯವಿಟ್ಟು ನಮಗೆ ಉಪದೇಶಮಾಡಿ ಎಂದು ಬೇಡಿಕೊಂಡರು. ಪ್ರಜಾಪತಿ ಅವರತ್ತ ಒಮ್ಮೆ ನೋಡಿ, 'ಸರಿ, ಬ್ರಹ್ಮಚರ್ಯ ವ್ರತವನ್ನು ಆಚರಿಸುತ್ತಾ, ನಮ್ಮ ಬಳಿ ಶಿಷ್ಯವೃತ್ತಿಯನ್ನು ಮಾಡಿ' ಎಂದರು. ಅದಕ್ಕೆ ಸಿದ್ಧರಾಗಿ ಬಂದಿದ್ದ ಅವರು, ಹಾಗೆಯೆ ಆಗಲಿ ಎಂದು ಅವರ ಸೇವೆ ಮಾಡುತ್ತಾ ಅವರ ಬಳಿ ಇದ್ದರು.

ಸ್ವಲ್ಪ ದಿನಗಳಾದ ಮೇಲೆ, ಎಲ್ಲರನ್ನೂ ಕರೆದು, ನಿಮಗೆ ಈಗ ಉಪದೇಶ ನೀಡುತ್ತೇನೆ. ಸರಿಯಾಗಿ ಅರ್ಥಮಾಡಿಕೊಳ್ಳಿ ಎಂದು ಹೇಳಿ, ಎಲ್ಲರಿಗೂ ಕೇಳುವಂತೆ ಗಟ್ಟಿಯಾಗಿಯೂ ಸ್ಪಷ್ಟವಾಗಿಯೂ, 'ದ, ದ, ದ' ಎಂದು ಗುಡುಗು ಮೊಳಗುವಂತೆ ಗಂಭೀರವಾಗಿ

ಒಂದು ಉಪನಿಷತ್ತಿನ ಕಥೆಯ ಮೂಲಕ ಆಧ್ಯಾತ್ಮಿಕ ಸಾಧಕನಲ್ಲಿರಬೇಕಾದ ಬಹು ಮುಖ್ಯ ಅರ್ಹತೆಗಳನ್ನು ಸ್ವಾರಸ್ಯಕರವಾಗಿ ವಿವರಿಸಿರುವ ಸ್ವಾಮಿ ರಾಘವೇಶಾನಂದರು ಬೆಂಗಳೂರಿನ ಅಲಸೂರಿನಲ್ಲಿರುವ ಸ್ವಾಮಿ ವಿವೇಕಾನಂದ ಆಶ್ರಮದ ಅಧ್ಯಕ್ಷರಾಗಿರುವರು.

ಶಬ್ದಮಾಡಿದರು. 'ಇದೇ ನನ್ನ ಉಪದೇಶ ಸರಿಯಾಗಿ ಅರ್ಥ ಮಾಡಿಕೊಳ್ಳಿ' ಎಂದರು.

ಅವರೆಲ್ಲಾ ಸರಿ ಎಂದು ತಲೆ ಅಲ್ಲಾಡಿಸಿದರು. 'ದ' ಎನ್ನುವುದು ಒಂದು ಪದದ ಮೊದಲನೆ ಅಕ್ಷರ ಎಂದು ಎಲ್ಲಾ ಅರ್ಥ ಮಾಡಿಕೊಂಡರು. ಆ ಪದದ ಉಳಿದ ಅಕ್ಷರಗಳನ್ನು ಜೋಡಿಸಿ, ಆ ಪದವನ್ನು ಪೂರ್ತಿ ಮಾಡಿ, ಅದೇ ಪ್ರಜಾಪತಿಗಳಿಂದ ಬಂದ ಪವಿತ್ರವಾದ ಆದೇಶವೆಂದು ಅವರು ಸ್ವೀಕರಿಸಬೇಕಾಗಿತ್ತು. ಆ ಪದ ಯಾವುದಿರಬಹುದೆಂದು ಅವರವರ ಪ್ರವೃತ್ತಿಗೆ ತಕ್ಕಂತೆ ಯೋಚಿಸಲಾರಂಭಿಸಿದರು.




ಮಾರನೆಯ ದಿವಸ ಪ್ರಜಾಪತಿಯು ದೇವತೆಗಳನ್ನು ಕರೆದು, 'ಏನು, ಅರ್ಥವಾಯಿತೇ?' ಎಂದು ಕೇಳಿದ.

ರಾತ್ರಿಯೆಲ್ಲಾ ಯೋಚಿಸಿ ಅವರು ಒಂದು ತೀರ್ಮಾನಕ್ಕೆ ಬಂದಿದ್ದರು, 'ಹೌದು, ಗುರುಗಳೇ, ಅರ್ಥವಾಯಿತು; ನೀವು "ದ" ಎಂದರೆ "ದಾಮ್ಯತ" ಎಂದು ಹೇಳಿದ್ದೀರಿ' ಎಂದರು.

ದೇವತೆಗಳು ಉತ್ತಮವಾದ ಸುಖಕರವಾದ ಲೋಕಗಳಲ್ಲಿ ವಾಸಿಸಿಕೊಂಡು ಯಾವಾಗಲೂ ಇಂದ್ರಿಯ ಭೋಗಗಳಲ್ಲಿ ಮಗ್ನರಾಗಿರುವುದರಿಂದ ಅವರು ಹೀಗೆ ಅರ್ಥ ಮಾಡಿಕೊಂಡಿದ್ದರು. ಅವರಿಗೆ ಗೊತ್ತು ಆತ್ಮ ಸಾಕ್ಷಾತ್ಕಾರಕ್ಕೆ ಪ್ರಾಪಂಚಿಕ ಸುಖ ಒಂದು ಶತ್ರುವಿನಂತೆ ಎಂದು. ಆದುದರಿಂದ ಆತ್ಮ ಸಾಕ್ಷಾತ್ಕಾರಕ್ಕೆ ಪ್ರಜಾಪತಿಗಳು ನಮಗೆ 'ದಾಮ್ಯತ', ಎಂದರೆ ಇಂದ್ರಿಯಗಳನ್ನು ನಿಗ್ರಹಿಸುವಂತೆ ಹೇಳಿದ್ದಾರೆ ಎಂದು ಅರ್ಥಮಾಡಿಕೊಂಡರು.

ನಂತರ ಪ್ರಜಾಪತಿ ಅಸುರರನ್ನು ಕರೆದು, 'ನಿಮಗೆ ಅರ್ಥವಾಯಿತೇ?' ಎಂದರು. ಅಸುರರೂ ರಾತ್ರಿಯೆಲ್ಲಾ ಯೋಚಿಸಿ ಒಂದು ನಿರ್ಧಾರಕ್ಕೆ ಬಂದಿದ್ದರು.

'ಹೌದು, ಗುರುಗಳೇ, ಅರ್ಥವಾಯಿತು' ಎಂದರು.

'ಸರಿ, ಏನು?' ಎಂದು ಪ್ರಜಾಪತಿ ಕೇಳಿದರು.

'ನೀವು ದ ಎಂದರೆ "ದಯಧ್ವಂ" ಎಂದು ಹೇಳಿದ್ದೀರಿ' ಎಂದರು.

ಅಸುರರು ಕ್ರೂರಿಗಳೂ ಇತರರ ರಕ್ತಪಾತದಿಂದಲೇ ಸಂತೋಷವನ್ನು ಅನುಭವಿಸುವವರೂ ಆಗಿದ್ದುದರಿಂದ 'ದಯಧ್ವಂ' ಎಂದರೆ ದಯಾವಂತರಾಗಿರಿ ಎಂದು ಹೇಳಿದ್ದಾರೆ ಎಂದುಕೊಂಡರು.

ಮನುಷ್ಯರನ್ನು ಕರೆದು, ನೀವೇನು ಅರ್ಥ ಮಾಡಿಕೊಂಡಿರಿ? ಎಂದು ಕೇಳಿದರು. ಮನುಷ್ಯರಿಗಾದರೋ ಆ ಪದವನ್ನು ಕೇಳಿದೊಡನೆಯೇ ತಮ್ಮ ತೀವ್ರವಾದ ಸ್ವಾರ್ಥದ ಅರಿವಾಯಿತು. ಆದುದರಿಂದ ಅವರು 'ದತ್ತ' ಎಂದು ಹೇಳಿದಿರಿ ಎಂದರು. ಆಧ್ಯಾತ್ಮಿಕ ಏಳಿಗೆಗೆ, ಆತ್ಮ ಸಾಕ್ಷಾತ್ಕಾರಕ್ಕೆ ನಾವು ನಮ್ಮ ಸ್ವಾರ್ಥವನ್ನು ಬಿಟ್ಟು, ದಾನಿಗಳಾಗಬೇಕು ಎಂದು ಕಲಿತುಕೊಂಡರು ಮನುಷ್ಯರು.

ನಿಜ, ಆತ್ಮ ಸಾಕ್ಷಾತ್ಕಾರ ಸಾಧನೆಗೆ ಈ ಮೂರೂ ಆವಶ್ಯಕ. ದೇವತೆಗಳು, ಮನುಷ್ಯರು, ಅಸುರರು ಎಂಬ ಮೂರು ಶಬ್ದಗಳು ಮನುಷ್ಯರ ಸ್ವಾಭಾವಿಕ ಪ್ರವೃತ್ತಿಗನುಗುಣವಾಗಿ, ನಮಗೇ ಅನ್ವಯಿಸುತ್ತವೆ. ಉತ್ತಮ ಗುಣಗಳಿಂದ ನಾವು ಕೂಡಿದ್ದರೂ, ನಮ್ಮಲ್ಲಿ ಕಾಮುಕತೆ ಅತೀವವಾಗಿರುವುದರಿಂದ ನಾವೂ ದೇವತೆಗಳಂತೆಯೇ. ಹಾಗೆಯೇ ಹಿಂಸಾಪರತೆ, ಕ್ರೂರತ್ವ ನಮ್ಮಲ್ಲಿ ತುಂಬಿರುವುದರಿಂದ ನಾವೂ ಅಸುರರೇ. ಲೋಭವಂತೂ ಇದ್ದೇ ಇದೆ. ಆದುದರಿಂದ ಆತ್ಮಜ್ಞಾನದ ಲಾಭ ಪಡೆಯಬೇಕಾದರೆ ನಾವೂ ದ, ದ, ದ ಎಂದರೆ ದಾಂತರಾಗಿರಬೇಕು, ದಾನಿಗಳಾಗಬೇಕು ಹಾಗೂ ದಯಾವಂತರಾಗಬೇಕು.

ಇದನ್ನೇ ಇನ್ನೊಂದು ವಿಧದಲ್ಲಿ ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ೧೬ನೆಯ ಅಧ್ಯಾಯದ ೨೧ನೆ ಶ್ಲೋಕದಲ್ಲಿ ಅರ್ಜುನನಿಗೆ ಉಪದೇಶಿಸುತ್ತಾನೆ:

'ಅರ್ಜುನ, ಕಾಮ, ಕ್ರೋಧ ಮತ್ತು ಲೋಭ—ಇವು ಮೂರೂ ನರಕದ ದ್ವಾರಗಳು. ಇವು ಆತ್ಮನಾಶಕ್ಕೆ ಕಾರಣ. ಆದುದರಿಂದ ಈ ಮೂರನ್ನೂ ಬಿಡಬೇಕು.' ಇದನ್ನು ಬಿಡುವುದು ಎಂದರೆ ಇದಕ್ಕೆ ಸಂಬಂಧಪಟ್ಟ ಇಂದ್ರಿಯಗಳನ್ನು ನಿಗ್ರಹಿಸುವುದು ಎಂದರ್ಥ. ಅದನ್ನು ಸುಂದರವಾಗಿ ಪ್ರಜಾಪತಿಗಳು ಬರಿಯ 'ದ, ದ, ದ' ಎಂಬ ಪದದಿಂದ ಸೂಚಿಸಿದರು. ಪ್ರಕೃತಿಯ ಎಲ್ಲಾ ಕಾರ್ಯಗಳಿಗೂ ಆಧ್ಯಾತ್ಮಿಕ ಅರ್ಥವಿದೆ. ಆಕಾಶದಲ್ಲಿ ದ, ದ, ದ ಎಂಬ ಗಂಭೀರ ಗುಡುಗಿನ ಶಬ್ದವನ್ನು ಕೇಳಿದರೆ, ಅದು ಮನುಷ್ಯನನ್ನು ಆಧ್ಯಾತ್ಮಿಕತೆಯ ಕಡೆಗೆ ತಿರುಗಲು ಸೂಚನೆ ಕೊಡುತ್ತಿರುತ್ತದೆ. ಇದರಿಂದ ನಾವು ಪಾಠವನ್ನು ಕಲಿತು, ಆಧ್ಯಾತ್ಮಿಕ ಸಾಧನೆಯಲ್ಲಿ ಮುಂದೆ ಮುಂದೆ ಹೋಗಬೇಕಲ್ಲವೇ?